# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

## SC.33/2024

| | | |
|---|---|---|
| ಸಾಕ್ಷಿದಾರರ ಹೆಸರು | : | ಅಂಜನಪ್ಪ ಪೂಜಾರ್ |
| ತಂದೆಯ/ಗಂಡನ ಹೆಸರು | : | ಮಂಜಪ್ಪ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಸಿಪಿಸಿ-349, ಬಡಾವಣೆ ಪೊಲೀಸ್ ಠಾಣೆ , ದಾವಣಗೆರೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 12

ಸಿ.ಡಬ್ಲ್ಯೂ 15

ದಿ: 19-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ )**:

1. 2021 ನೇ ಇಸ್ವಿಯಿಂದ ನಾನು ಬಡಾವಣೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್ಸಟೇಬಲ್ ಆಗಿ ಕೆಲಸ ನಿರ್ವಸುತ್ತಿರುತ್ತೇನೆ. ದಿ.21-09-2022 ರಂದು ರಾತ್ರಿ 9-45 ಗಂಟೆಗೆ ಚಾಸಾ-16 ರವರು ಈ ಪ್ರಕರಣದಲ್ಲಿ ನನಗೆ ಮತ್ತು ಚಾಸಾ-14 ರವರಿಗೆ ಆರೋತರನ್ನು ಪತ್ತೆ ಹಚ್ಚಲು ಮೌಖಿಕವಾಗಿ ಆದೇಶ ಮಾಡಿರುತ್ತಾರೆ. ಅದರಂತೆ ನಾನು ಮತ್ತು ಚಾಸಾ-14 ರವರು ಆರೋಪಿತರ ಪತ್ತೆ ಮಾಹಿತಿ ಸಂಗ್ರಹಿಸುತ್ತಿರುವಾಗ ರಾತ್ರಿ 10-00 ಗಂಟೆ ಸಮಯದಲ್ಲಿ ಆರೋಪಿ ರಮೇಶ್ ನಾಯ್ಕ ರವರು ದಾವಣಗೆರೆಯ ಹೈ ಸ್ಕೂಲ್

ಮೈದಾನದಲ್ಲಿ ಕೈ ಗಾಡಿಯಲ್ಲಿ ಮಸಾಲಾ ಮಂಡಕ್ಕಿ ವ್ಯಾಪಾರ ಮಾಡುತ್ತಿರುವುದಾಗಿ ಮಾಹಿತಿ ಬಂತು. ನಾವುಗಳು ಕೂಡಲೇ ಅಲ್ಲಿಗೆ ಹೋದಾಗ ಕೈಗಾಡಿಯ ಬಳಿ ಹೋಗುತ್ತಿರುವಾಗ ಮಂಡಕ್ಕಿ ವ್ಯಾಪಾರ ಮಾಡುತ್ತಿದ್ದ ಒಬ್ಬ ಹುಡುಗ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದು , ಆತನನ್ನು ಹಿಂಬಾಲಿಸಿ ಹಿಡಿದುಕೊಂಡು ಆತನ ಹೆಸರು ವಿಳಾಸ ಕೇಳಲಾಗಿ ಆತ ತನ್ನ ಹೆಸರು ರಮೇಶ್ ನಾಯ್ಕ , ತಂದೆ ದೇವೇಂದ್ರ ನಾಯ್ಕ ಎಂದು ತಿಳಿಸಿದ. ಆತನು ಈ ಪ್ರಕರಣದ ಆರೋಪಿ ಎಂದು ಖಚಿತಪಡಿಸಿಕೊಂಡು , ರಾತ್ರಿ 10-30 ಗಂಟೆಗೆ ಠಾಣೆಗೆ ಕರೆದುಕೊಂಡು ಬಂದು ತನಿಖಾಧಿಕಾರಿ ಬಳಿ ಹಾಜರುಪಡಿಸಿದೇವು. ಇದರ ಬಾಬ್ತು ಚಾಸಾ-14 ರವರ ವರದಿ ನೀಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರಪರ ವಕೀಲರಿಂದ.**

2. ಮೌಖಿಕ ಆದೇಶವನ್ನು ಚಾಸಾ-16 ರವರು ನಮಗೆ ನೀಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಸಾಲಾ ಮಂಡಕ್ಕಿ ವ್ಯಾಪಾರ ಮಾಡುತ್ತಿದ್ದ ವ್ಯಕ್ತಿ ಹೈಸ್ಕೂಲ್ ಮೈದಾನದಲ್ಲಿ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಯವರಿಗೆ ನಾನು ಇದರ ಬಾಬ್ತು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ತನ್ನ ಮನೆಯಲ್ಲಿ ರಾತ್ರಿ ಮಲಗಿದ್ದವನನ್ನು ಸಾಹೆಬರು ಕರೆಯುತ್ತಿದ್ದಾರೆ ಎಂದು ಹೇಳಿ ಕರೆದುಕೊಂಡು ಹೋಗಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.